UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
28-11-2026
Saturday

ಕೃಷಿಗೆ ಹವಾಮಾನ ಎಐ ಬಳಕೆ ಅಗತ್ಯ: ಗೋಪಾಲ್

ಬೆಂಗಳೂರು: ಕೃಷಿ ಕ್ಷೇತ್ರದಲ್ಲಿ ದತ್ತಾಂಶ ವಿಜ್ಞಾನ, ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಕಲಿಕೆಯಂತಹ ಆಧುನಿಕ ತಂತ್ರಜ್ಞಾನಗಳ ಬಳಕೆಯಿಂದ ಮಹತ್ತರ ಬದಲಾವಣೆ ತರಲು ಸಾಧ್ಯವಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮಹಾನಿರ್ದೇಶಕ ಡಾ.ಗೋಪಾಲ್ ಕೃಷ್ಣ ಪಟ್ರಾ ಅಭಿಪ್ರಾಯಪಟ್ಟರು.

ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ (ಜಿಕೆವಿಕೆ) ಡಿಜಿಟಲ್ ಕೃಷಿಗಾಗಿ ಕೃಷಿ ಹವಾಮಾನ ಬುದ್ಧಿಮತ್ತೆ ಕುರಿತ 3 ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಉಪಗ್ರಹ, ರಾಡಾರ್, ಹವಾಮಾನ ಕೇಂದ್ರಗಳು ಹಾಗೂ ಕೃಷಿ ಕ್ಷೇತ್ರಗಳಲ್ಲಿನ ಸಂವೇದಕಗಳಿಂದ ನಿರಂತರವಾಗಿ ಸಂಗ್ರಹವಾಗುವ ದತ್ತಾಂಶವನ್ನು ವಿಶ್ಲೇಷಿಸುವ ಮೂಲಕ ರೈತರಿಗೆ ನಿಖರವಾದ ಹಾಗೂ ಸಮಯೋಚಿತ ಮಾಹಿತಿ ಒದಗಿಸಬಹುದು ಎಂದರು.

ವಿಶೇಷವಾಗಿ ಗುಡುಗು, ಮಿಂಚು, ಆಲಿಕಲ್ಲು ಮಳೆ, ಅತಿವೃಷ್ಟಿ ಮತ್ತು ಬಲವಾದ ಗಾಳಿಯಂತಹ ಪ್ರತಿಕೂಲ ಹವಾಮಾನ ಪರಿಸ್ಥಿತಿಗಳ ಬಗ್ಗೆ ಕೆಲವೇ ಗಂಟೆಗಳ ಮುಂಚಿತವಾಗಿ ಮುನ್ಸೂಚನೆ ನೀಡುವುದು ಅತ್ಯಗತ್ಯ. ಇಂತಹ ಎಚ್ಚರಿಕೆಗಳು ಡಿಜಿಟಲ್ ವೇದಿಕೆಗಳ ಮೂಲಕ ತ್ವರಿತವಾಗಿ ರೈತರನ್ನು ತಲುಪುವ ವ್ಯವಸ್ಥೆ ಬಲಗೊಳ್ಳಬೇಕು. ಕೃಷಿ ಸಂಶೋಧನೆ ಮತ್ತು ತಂತ್ರಜ್ಞಾನಗಳ ಸಮನ್ವಯ ಸುಸ್ಥಿರ ಕೃಷಿ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ಹೇಳಿದರು.

ಅಮೆರಿಕದ ಕಾನ್ಸಾಸ್ ಸ್ಟೇಟ್ ವಿಶ್ವವಿದ್ಯಾಲಯದ ಡಾ.ಪಿ.ವಿ. ವರಪ್ರಸಾದ್ ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಪಿ.ವೆಂಕಟರಮಣ, ಸಂಶೋಧನಾ ನಿರ್ದೇಶಕ ಡಾ. ಮುಡಲಗಿರಿಯಪ್ಪ ಮತ್ತಿತರರಿದ್ದರು.

Samyuktha Kar.Pg.02

3 ಲಕ್ಷ ರು. ಮೊತ್ತದ ರೈತ ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಸಾಧಕ ರೈತರನ್ನು ಗುರುತಿಸಿ, ಗೌರವ ಒದಗಿಸುವ ಮಹತ್ವಾಕಾಂಕ್ಷೆಯೊಂದಿಗೆ ಆರಂಭಗೊಂಡ ರೈತ ಪೀಠ ಪ್ರಶಸ್ತಿ ಇದೀಗ ಎರಡನೇ ಆವೃತ್ತಿಗೆ ಕಾಲಿಟ್ಟಿದೆ. ಎಸ್‌ಕೆಎಫ್ ಎಲಿಕ್ಸರ್ ಸಂಸ್ಥೆ ಮುಖ್ಯಸ್ಥರು ಹಾಗೂ ಖ್ಯಾತ ಕೃಷಿ ಉದ್ಯಮಿ ಡಾ.ಜೆ.ರಾಮಕೃಷ್ಣ ಆಚಾರ್ ಸ್ಥಾಪಿಸಿರುವ ರೈತಪೀಠ ಪ್ರಶಸ್ತಿ 2027ರ (2ನೇ ಆವೃತ್ತಿ) ಪುರಸ್ಕಾರಕ್ಕೆ ಅರ್ಹ ಹಾಗೂ ಸಾಧಕ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ. ಡಿ.15 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿದೆ. ಕಳೆದ ವರ್ಷ ಒಂದು ಲಕ್ಷ ರು.ಮೊತ್ತದ ಒಂದು ಪ್ರಶಸ್ತಿ ನೀಡಲಾಗಿದ್ದು, ಈ ಆವೃತ್ತಿಯಲ್ಲಿ ರೂ. 3 ಲಕ್ಷ ಮೊತ್ತದ ಪ್ರಶಸ್ತಿಯನ್ನು ಮೂವರು ರೈತರಿಗೆ ನೀಡಲಾಗುತ್ತದೆ. ಕರ್ನಾಟಕ, ಮಹಾರಾಷ್ಟ್ರ, ಕೇರಳ, ಆಂಧ್ರಪ್ರದೇಶ, ತೆಲಂಗಾಣ ಹಾಗೂ ತಮಿಳುನಾಡಿನಿಂದಲೂ ಅರ್ಜಿಯನ್ನು ಆಹ್ವಾನಿಸಲಾಗುತ್ತಿದೆ. ಆಯ್ಕೆಯಾದ ಪ್ರತಿ ಸಾಧಕ ರೈತರಿಗೆ ತಲಾ 1,00,000 ನಗದು ಪುರಸ್ಕಾರ ನೀಡಿ ಗೌರವಿಸಲಾಗುವುದು. ಸಣ್ಣ ಮತ್ತು ಮಧ್ಯಮ ಜಮೀನಿನಲ್ಲಿ ಸುಸ್ಥಿರ, ಸಾವಯವ, ಗೋ-ಆಧಾರಿತ ಹಾಗೂ ನೂತನ ತಂತ್ರಜ್ಞಾನಾಧಾರಿತ ಮಾದರಿ ಕೃಷಿ ನಡೆಸುತ್ತಿರುವ ರೈತರಿಗೆ ಆಯ್ಕೆಯಲ್ಲಿ ಮೊದಲ ಆದ್ಯತೆ ನೀಡಲಾಗುತ್ತದೆ. ಆಸಕ್ತ ರೈತರು ಅಥವಾ ರೈತರ ಬಗ್ಗೆ ತಿಳಿದಿರುವವರು ನಾಮ ನಿರ್ದೇಶನ ಮಾಡಬಹುದು. ಅರ್ಜಿ ನಮೂನೆಯು ಡಿಡಿಡಿ. gaudhama.com ವೆಬ್ ಸೈಟ್ ನಲ್ಲಿ ಲಭ್ಯವಿದ್ದು, ಅದೇ ನಮೂನೆಯಲ್ಲಿ ಅರ್ಜಿ ಸಲ್ಲಿಸಬೇಕು.

Vishwavani Pg.05

ಜಿಕೆವಿಕೆಯಲ್ಲಿ ರೈತ ಸಂತೆ ಇಂದು

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವ ವಿದ್ಯಾಲಯದ ಕ್ಯಾಂಪಸ್ ಜಿಕೆವಿಕೆಯಲ್ಲಿ ಶನಿವಾರ (ನ.28) ಬೆಳಗ್ಗೆ 7ರಿಂದ ಮಧ್ಯಾಹ್ನ 3ರವರೆಗೆ ರೈತಸಂತೆ ಏರ್ಪಡಿಸ ಲಾಗಿದೆ. ಪ್ರತಿ ತಿಂಗಳ ಕೊನೆಯ ಶನಿವಾರ ನಡೆಯುವ ಸಂತೆಯಲ್ಲಿ ಈ ಬಾರಿ ರಾಜಮುಡಿ ಅಕ್ಕಿ, ದ್ರಾಕ್ಷಿ, ಬೇಲದ ಹಣ್ಣು, ತೆಂಗಿನಕಾಯಿ ಬರ್ಫಿ, ಸಾಮೆ ಲಡ್ಡು, ಡ್ರ್ಯಾಗನ್ ಫ್ರೂಟ್ ಕುಕೀಸ್ ಮತ್ತು ಕೇಕ್, ಸಿರಿಧಾನ್ಯ ತಿಂಡಿಗಳು ಪ್ರಮುಖ ಆಕರ್ಷಣೆಯಾಗಲಿವೆ. ಜತೆಗೆ ಸಾವಯವ ಉತ್ಪನ್ನ, ಅಲಂಕಾರಿಕ ಗಿಡಗಳು, ಕರಕುಶಲ ವಸ್ತುಗಳು, ಜೇನು ಉತ್ಪನ್ನ ಹಾಗೂ ತಾಜಾ ತರಕಾರಿ, ಹಣ್ಣುಗಳು ಮಾರಾಟಕ್ಕೆ ಸಿಗಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

Vijayavani Pg.3c

ವೀಳ್ಯದೆಲೆ ಬೆಳೆಗೆ ಕರೀಕಡ್ಡಿ ರೋಗ: ರೈತರಲ್ಲಿ ಆತಂಕ

ವೀಳ್ಯದೆಲೆ ಬಳ್ಳಿಗಳಲ್ಲಿ ಕಪ್ಪು ಚುಕ್ಕೆ ಕಾಣಿಸಿಕೊಳ್ಳುವುದೇ ಕರೀಕಡ್ಡಿ ರೋಗ | ರೋಗಕ್ಕೆ ಕಾರಣ ಪತ್ತೆಹಚ್ಚಲು ಮುಂದಾದ ಕೃಷಿ ವಿಜ್ಞಾನಿಗಳು

▪ ಪಿ.ವೈ.ರವಿಂದ್ರ ಹೇರ್ಳೆ
ಸಂ.ಕ. ಸಮಾಚಾರ, ರಾಮನಗರ

ಬೆಂಗಳೂರು ದಕ್ಷಿಣ ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆಗಳಲ್ಲಿ ಒಂದಾಗಿರುವ ವೀಳ್ಯದೆಲೆ ಬೆಳೆಗೆ ಇದೀಗ ಎದುರಾಗಿರುವ ಕರೀಕಡ್ಡಿ ರೋಗ ಬೆಳೆಗಾರರನ್ನು ಆತಂಕಕ್ಕೆ ಸಿಲುಕುವಂತೆ ಮಾಡಿದೆ. ಜಿಲ್ಲೆಯ ಕೆಲ ಎಲೆ ತೋಟಗಳಲ್ಲಿ ರೋಗ ಕಾಣಿಸಿಕೊಳ್ಳುತ್ತಿದ್ದು, ಉಲ್ಬಣಗೊಂಡಿದ್ದೇ ಆದಲ್ಲಿ ಇದನ್ನು ನಿಯಂತ್ರಣಕ್ಕೆ ತರುವುದು ಹೇಗೆ ಎಂಬ ಚಿಂತೆಯಲ್ಲಿ ರೈತರು ಸಿಲುಕಿದ್ದಾರೆ.

ಸಂಪೂರ್ಣ ಸಾವಯವ ಪದ್ಧತಿಯಲ್ಲಿ ಬೆಳೆಯುವ ವೀಳ್ಯದೆಲೆಯನ್ನು ಬೆಳೆಯುವ ಕೆಲವೇ ಕೆಲವು ಭಾಗಗಳಲ್ಲಿ ರಾಮನಗರ ಜಿಲ್ಲೆಯೂ ಒಂದಾಗಿದೆ. ಜಿಲ್ಲೆಯ ಚನ್ನಪಟ್ಟಣ ತಾಲೂಕಿನಲ್ಲಿ ಬಹುಪಾಲು ಹಾಗೂ ಮಾಗಡಿ ತಾಲ್ಲೂಕಿನಲ್ಲಿ ಅಲ್ಪ ಪ್ರಮಾಣದಲ್ಲಿ ವೀಳ್ಯದೆಲೆಯನ್ನು ವಾಣಿಜ್ಯ ಬಳಕೆಗೆ ಬೆಳೆಯಲಾಗುತ್ತದೆ. ಜಿಲ್ಲೆಯಲ್ಲಿ ಬೆಳೆಯುವ ವೀಳ್ಯದೆಲೆಗೆ ಉತ್ತಮ ಮಾರುಕಟ್ಟೆ ಸಹ ಇದೆ.

ಜಿಲ್ಲೆಯಲ್ಲಿ ವೀಳ್ಯದೆಲೆಯನ್ನು 800 ರಿಂದ 1 ಸಾವಿರ ಎಕರೆ ವಿಸ್ತೀರ್ಣದಲ್ಲಿ ಬೆಳೆಯುತ್ತಿದ್ದು, ಚನ್ನಪಟ್ಟಣ ತಾಲ್ಲೂಕಿನ ಸಿಂಗರಾಜಪುರ, ಭೂಹಳ್ಳಿ, ಮೆಣಸಿಗನಹಳ್ಳಿ, ಅರಳಾಳುಸಂದ್ರ, ವಿರೂಪಸಂದ್ರ, ನಾಗವಾರ, ಮೊಗೇನಹಳ್ಳಿ, ಚಿಕ್ಕೆನಹಳ್ಳಿ, ಮಾಗಡಿ ತಾಲೂಕಿನ ಕುದೂರು ಹೋಬಳಿ, ಕನಕಪುರ ತಾಲೂಕಿನ ಆಯ್ದ ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದೆ.

ತೋಟಗಾರಿಕಾ ಇಲಾಖೆ ಅಂದಾಜಿನ ಪ್ರಕಾರ ಪ್ರತಿದಿನ 250 ರಿಂದ 400 ಪಿಂಡಿ (10000 ಸಾವಿರ ಎಲೆಗಳ ಕಟ್ಟು) ಯಷ್ಟು ವೀಳ್ಯದೆಲೆಯನ್ನು ಬೆಳೆಯಲಾಗುತ್ತಿದೆ. ಇತ್ತೀಚೆಗೆ ಮಾರುಕಟ್ಟೆಯಲ್ಲಿ



ವೀಳ್ಯದೆಲೆಗೆ ಉತ್ತಮ ಬೆಲೆ ಇದ್ದು ಪ್ರತಿ ಪಿಂಡಿ 2 ಸಾವಿರ ರೂ. ನಿಂದ 3 ಸಾವಿರ ರೂ. ವರೆಗೆ ಚನ್ನಪಟ್ಟಣ ಎಪಿಎಂಸಿ ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿದೆ.

ಸಂಕ್ರಾಂತಿ ಹಬ್ಬದ ಬಳಿಕ ಹೆಚ್ಚು ಶುಭಕಾರ್ಯಗಳು ನಡೆಯುವ ಕಾರಣ ಬೆಲೆ ದುಪ್ಪಟ್ಟಾಗುವ ಸಾಧ್ಯತೆ ಇದೆ. 2023ರಲ್ಲಿ ಪ್ರತಿ ಪಿಂಡಿ

ಚನ್ನಪಟ್ಟಣ ತಾಲ್ಲೂಕಿನ ಸಿಂಗರಾಜಪುರ ಹಾಗೂ ಸುತ್ತಮುತ್ತಲ ಕೆಲ ಗ್ರಾಮದಲ್ಲಿ ವೀಳ್ಯದೆಲೆಗೆ ರೋಗ ಕಾಣಿಸಿಕೊಂಡಿರುವ ಬಗ್ಗೆ ಮಾಹಿತಿ ಲಭ್ಯವಾಗಿದೆ. ರೋಗ ನಿರ್ಣಯ ಮಾಡುವ ಉದ್ದೇಶದಿಂದ ಕೃಷಿ ವಿಜ್ಞಾನಿಗಳ ತಂಡ ತೋಟಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ. ರೋಗ ಹಾಗೂ ರೋಗದ ಕಾರಣವನ್ನು ಪತ್ತೆಹಚ್ಚಿದ ಬಳಿಕ ಪರಿಹಾರ ಕ್ರಮ ಕೈಗೊಳ್ಳಲಾಗುವುದು.

▪ ಮಂಜುನಾಥ್ । ಉಪನಿರ್ದೇಶಕ, ತೋಟಗಾರಿಕಾ ಇಲಾಖೆ, ಬೆಂಗಳೂರು. ದಕ್ಷಿಣ ಜಿಲ್ಲೆ.

ವೀಳ್ಯದೆಲೆಗೆ 18 ರಿಂದ 22 ಸಾವಿರ ರೂ. ವರೆಗೆ ಬೆಲೆ ಸಿಕ್ಕಿತ್ತು.

ಬರ, ವಿದ್ಯುತ್ ಸಮಸ್ಯೆ, ಕಾಡುಪ್ರಾಣಿಗಳ ಹಾವಳಿ ಹೀಗೆ ಸಾಲು ಸಾಲು ಸವಾಲುಗಳ ನಡುವೆ ವೀಳ್ಯದೆಲೆ ಬೆಳೆಯನ್ನು ರಕ್ಷಣೆ ಮಾಡಿಕೊಂಡು ಬಂದಿರುವ ರೈತರಿಗೆ ಇದೀಗ ಎದುರಾಗಿರುವ ಕರೀಕಡ್ಡಿ ರೋಗ ಆತಂಕ ಮೂಡುವಂತೆ ಮಾಡಿದೆ. ವೀಳ್ಯದೆಲೆಯನ್ನು ಅತಿ ಸಣ್ಣ ರೈತರೇ ಬೆಳೆಯುತ್ತಿದ್ದು, 10 ರಿಂದ 20 ಗುಂಟೆ ಭೂಮಿಯಲ್ಲಿ ಎಲೆ ತೋಟವನ್ನು ರೈತರು ನಿರ್ವಹಣೆ ಮಾಡುತ್ತಿದ್ದಾರೆ.

ರೈತರು ಮಾಹಿತಿ ನೀಡಿರುವ ಪ್ರಕಾರ ಎಲೆ ತೋಟದ ಕೆಲವೊಂದು ಎಲೆ ಬಳ್ಳಿಗಳಲ್ಲಿ ಕಪ್ಪು ಚುಕ್ಕೆಗಳು ಕಾಣಿಸಿಕೊಳ್ಳುತ್ತಿವೆ. ಹೀಗೆ ರೋಗಕ್ಕೆ ತುತ್ತಾದ ಗಿಡದ ಬಳ್ಳಿಗಳ ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ ಕ್ರಮೇಣ ಉದುರುತ್ತಿವೆ. ಒಮ್ಮೆ ಎಲೆ ಉದುರಲು ಆರಂಭವಾಯಿತು ಎಂದರೆ ಇಡೀ ಬಳ್ಳಿ ನಿಷ್ಪಯೋಜಕವಾಗುತ್ತದೆ. ಮತ್ತೆ ಈ ಬಳ್ಳಿಗಳಲ್ಲಿ ಹೊಸ ಎಲೆಗಳು ಚಿಗುರುವುದಿಲ್ಲ.

Samyuktha Kar.Pg.4B

ಎಂದರು.

ನಾಳೆ ಜಿಕೆವಿಕೆಯಲ್ಲಿ ರೈತ ಸಂತೆ, ತಾಜಾ ಕೃಷಿ ಉತ್ಪನ್ನಗಳ ಮಾರಾಟ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ (ಜಿಕೆವಿಕೆ) ಆವರಣದಲ್ಲಿನ ಗೆಣಪತಿ ದೇವಸ್ಥಾನದ ಹತ್ತಿರ ನ.28 ರಂದು ಬೆಳಗ್ಗೆ 7ರಿಂದ ಸಂಜೆ 4 ಗಂಟೆವರೆಗೆ ರೈತ ಸಂತೆ ಆಯೋಜಿಸಲಾಗಿದೆ. ಈ ಬಾರಿಯ ರೈತ ಸಂತೆಯಲ್ಲಿ ತೆಂಗಿನಕಾಯಿ ಬರ್ಫಿ, ಸಾಮೆ ಲಡ್ಡು ಟೊಮೆಟೊ ಹಪ್ಪಳ, ಡ್ರ್ಯಾಗನ್ ಫ್ರೂಟ್ ಕುಕ್ಕೀಸ್ ಮತ್ತು ಕೇಕ್, ಸಾಂಪ್ರದಾಯಿಕ ಸಿಹಿತಿಂಡಿಗಳು, ದ್ರಾಕ್ಷಿ ಬೇಲದ ಹಣ್ಣು ಮರದ ಕರಕುಶಲ ವಸ್ತುಗಳು, ರಾಜಮುಡಿ ಅಕ್ಕಿ, ಅಣಬೆ, ಗಿಣ್ಣು ಅಲಂಕಾರಿಕ ಮೀನುಗಳು, ಆರೋಗ್ಯಕರ ಸಿರಿಧಾನ್ಯ ಬೇಕರಿ ಉತ್ಪನ್ನಗಳು, ಉಪಕರಣಗಳೂ ಸೇರಿದಂತೆ ತಾಜಾ ಹಣ್ಣು ತರಕಾರಿಗಳು ಮತ್ತು ಮೌಲ್ಯವರ್ಧಿತ ಸಿರಿಧಾನ್ಯ ಪದಾರ್ಥಗಳು ಲಭ್ಯವಿರಲಿವೆ. ಇದರ ಜತೆಗೆ ಸುಗಂಧ ಮತ್ತು ಔಷಧೀಯ ಸಸ್ಯಗಳು, ಸಾವಯವ ಉತ್ಪನ್ನಗಳು ಹಾಗೂ ಅಲಂಕಾರಿಕ ಗಿಡಗಳು, ಜೈವಿಕ ಗೊಬ್ಬರ, ಎರೆಹುಳು ಗೊಬ್ಬರ, ಕೃಷಿ ಯಂತ್ರೋಪಕರಣಗಳು ಮತ್ತು ಜೈವಿಕ ಕೀಟನಾಶಕಗಳು, ಅಡಕೆಯ ಕರಕುಶಲ ವಸ್ತುಗಳು, ಜೇನು ಕೃಷಿ, ವಾಣಿಜ್ಯೀಕರಣ ಉತ್ಪನ್ನಗಳು ಲಭ್ಯವಿರಲಿವೆ. ಸಾರ್ವಜನಿಕರು ಮತ್ತು ರೈತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಈ ವಿನೂತನ ಸಂತೆಯ ಪ್ರಯೋಜನ ಪಡೆದುಕೊಳ್ಳುವಂತೆ ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶನಾಲಯದ ಮುಖ್ಯಸ್ಥ ಡಾ.ಕೆ.ಪಿ. ರಘುಪ್ರಸಾದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Vijaya Kar.Pg.10
27.11.2026

ಕೃಷಿಯಲ್ಲಿ ಪರಿವರ್ತನೆ ಸಾಮರ್ಥ್ಯ

» ಅಂತಾ ರಾಷ್ಟ್ರೀಯ ಸಮ್ಮೇಳನದಲ್ಲಿ ಗೋಪಾಲ್ ಕೃಷ್ಣ ಪಟ್ಟಾ ಇಂಗಿತ



• **ಬೆಂಗಳೂರು:** ದತ್ತಾಂಶ ವಿಜ್ಞಾನ, ಕೃತಕ ಬುದ್ಧಿಮತ್ತೆ (ಎಐ) ಮತ್ತು ಯಂತ್ರ ಕಲಿಕೆ ತಂತ್ರಜ್ಞಾನಗಳು ಭಾರತೀಯ ಕೃಷಿ ಕ್ಷೇತ್ರದಲ್ಲಿ ಮಹತ್ತರ ಪರಿವರ್ತನೆ ತರುವ ಸಾಮರ್ಥ್ಯ ಹೊಂದಿವೆ ಎಂದು ಡಾ.ಗೋಪಾಲ್ ಕೃಷ್ಣ ಪಟ್ಟಾ ತಿಳಿಸಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ (ಜಿಕೆವಿಕೆ) ಹಾಗೂ ಗುಜರಾತಿನ ಆನಂದ್ ನಲ್ಲಿರುವ ಕೃಷಿ ಹವಾಮಾನವಾಸ್ತ್ರದ ಸಂಘ ಇವರ ಸಂಯುಕ್ತ ಆಶ್ರಯದಲ್ಲಿ ಡಿಜಿಟಲ್ ಕೃಷಿಗಾಗಿ ಕೃಷಿ ಹವಾಮಾನ ಬುದ್ಧಿಮತ್ತೆ ಕುರಿತ ಐದನೆಯ ಮೂರು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನಕ್ಕೆ ಚಾಲನೆ ನೀಡಿ ಮಾತನಾಡಿ, ಉಪಗ್ರಹಗಳು, ರಾಡಾರ್‌ಗಳು, ಸೆನ್ಸಾರ್‌ಗಳಂದ ಸಂಗ್ರಹವಾಗುವ ದತ್ತಾಂಶವನ್ನು ವಿಶ್ಲೇಷಿಸಿ, ಗುಡುಗು-ಮಿಂಚು, ಆಲಿಕಲ್ಲು ಮಳೆ ಹಾಗೂ ಪ್ರತಿಕೂಲ ಹವಾಮಾನದ ಕುರಿತು ಅಲ್ಪಾವಧಿಯ ಮುನ್ಸೂಚನೆ ನೀಡುವುದರಿಂದ ಬೆಳೆಗಳು, ಜಾನುವಾರುಗಳನ್ನು ರಕ್ಷಿಸಲು ಸಾಧ್ಯವಾಗುತ್ತದೆ. ಈ ಎಚ್ಚರಿಕೆಗಳು ಡಿಜಿಟಲ್ ಮಾಧ್ಯಮಗಳ ಮೂಲಕ ಶ್ರೀಸಾಮಾನ್ಯ ರೈತರನ್ನು ತಲುಪಬೇಕು ಎಂದರು.

ಹವಾಮಾನ ವೈಪರೀತ್ಯ: ಕೃಷಿಯನ್ನು ಹೆಚ್ಚು ಸಮರ್ಥ, ಸುಸ್ಥಿರ ಹಾಗೂ ಹವಾಮಾನ ವೈಪರೀತ್ಯಗಳನ್ನು ಎದುರಿಸಲು ಸನ್ನದ್ಧಗೊಳಿಸುವಲ್ಲಿ ಡಿಜಿಟಲ್ ತಂತ್ರಜ್ಞಾನ, ಅಂತರರಾಷ್ಟ್ರೀಯ ಮಟ್ಟದ ಸಂಶೋಧನಾ ಅನುಭವಗಳ ವಿನಿಮಯ ಮಹತ್ವದ್ದಾಗಿದೆ ಎಂದು ಅಮೆರಿಕದ ಕಾನ್ಸಾಸ್ ಸ್ಟೇಟ್ ವಿವಿ ಡಾ.ಪಿ.ವಿ. ವರ ಪ್ರಸಾದ್ ತಿಳಿಸಿದರು.

ಬೆಂಗಳೂರು ಕೃಷಿ ವಿವಿ ಕುಲಪತಿ ಡಾ. ಜಿ. ವೆಂಕಟೇಶಣ್ ಮಾತನಾಡಿ, ಹವಾಮಾನ ವೈಪರೀತ್ಯಗಳು ರೈತರ ಜೀವನೋಪಾಯದ ಮೇಲೆ ಪರಿಣಾಮ ಬೀರುತ್ತಿದ್ದು, ವಿಶ್ವವಿದ್ಯಾನಿಲಯಗಳು ರೈತರಿಗೆ ಅನುಕೂಲವಾಗುವ ತಂತ್ರಜ್ಞಾನ ಆಧಾರಿತ ಸಂಶೋಧನೆಗಳಿಗೆ ಆದ್ಯತೆ ನೀಡಿ ವೈಜ್ಞಾನಿಕ ಸಲಹೆಗಳನ್ನು ಸಕಾಲದಲ್ಲಿ ತಲುಪಿಸಬೇಕು ಎಂದರು.

Hosadiganta .Pg.02
27.11.2026

Pg.2